# ಹೊಸ ಗವರ್ನರ್!

ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ರಘುರಾಮ ರಾಜನ್ ನಿವೃತ್ತಿಯ ದಿನಾಂಕ ನಿಗದಿ ಆದಾಗ ಎದ್ದ ಪ್ರಶ್ನೆ– 'ಮುಂದೆ ಯಾರು?' ಎನ್ನುವುದು. ಕೆಲವೇ ವಾರಗಳ ಚರ್ಚೆಯ ಬಳಿಕ ಒಮ್ಮತದ ಹೆಸರು ಮೂಡಿದ್ದು ಆರ್‌ಬಿಐ ಡೆಪ್ಯುಟಿ ಗವರ್ನರ್ ಆಗಿದ್ದ ಉರ್ಜಿತ್ ಪಟೇಲ್ ಅವರದ್ದು. ರಾಜನ್ ಮುಂದುವರಿಕೆಗೆ ಬಹಿರಂಗ ಬೆಂಬಲ ಘೋಷಿಸಿದ್ದ ಉರ್ಜಿತ್, ಏಕಕಾಲದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಆಯ್ಕೆಯೂ ಆಗಿದ್ದುದು ವಿಶೇಷ. ಅಷ್ಟೇ ಅಲ್ಲ, ಪಿ.ಚಿದಂಬರಮ್ ಮತ್ತು ಅರುಣ್ ಜೇಟ್ಲಿ ಅವರೂ ಉರ್ಜಿತ್ ಆಯ್ಕೆಯಿಂದ ಖುಷಿಯಾಗಿದ್ದಾರೆ. ದಕ್ಷತೆ ಮತ್ತು ನೇರ ನಡೆ ನುಡಿಯಿಂದ ಜನಪ್ರಿಯರಾಗಿದ್ದ ರಘುರಾಮ್ ರಾಜನ್‌ರ ಮರುನೇಮಕ ಮಾಡದೆ ಟೀಕಾಪ್ರಹಾರಕ್ಕೆ ಒಳಗಾಗಿದ್ದ ಎನ್‌ಡಿಎ ಸರ್ಕಾರ, ಉರ್ಜಿತ್ ಪಟೇಲ್ ನೇಮಕದಿಂದ ಒಂದೇ ಕಲ್ಲಿಗೆ ಮೂರು ಹಕ್ಕಿಗಳನ್ನು ಹೊಡೆದಂತೆ ಆಗಿದೆ. ಒಂದೆಡೆ ತನಗೆ ಬೇಕಾದವರನ್ನೇ ಆಯ್ಕೆ ಮಾಡಿದ್ದು, ಇನ್ನೊಂದೆಡೆ ಪ್ರತಿಪಕ್ಷ ನಾಯಕರ ಟೀಕೆಗೆ ಅವಕಾಶ ಇಲ್ಲದಂತೆ ಮಾಡಿದ್ದು, ಮತ್ತೊಂದೆಡೆ ಗುಜರಾತ್‌ನಲ್ಲಿ ಕೇಂದ್ರದ ಎನ್‌ಡಿಎ ಸರ್ಕಾರದ ಮೇಲೆ ಸಿಟ್ಟಿಗೆದ್ದಿರುವ ಪಟೇಲ್ ಸಮುದಾಯಕ್ಕೆ ಬೆಣ್ಣೆ ಹಚ್ಚಿದ್ದು – ಈ ನೇಮಕದ ಪರಿಣಾಮಗಳು.

ಹಾಗೆಂದು ಉರ್ಜಿತ್ ಪಟೇಲ್ ನೇಮಕ ಕೇವಲ ರಾಜಕೀಯ ಕ್ರಿಯೆ ಮಾತ್ರವಲ್ಲ. ಬ್ಯಾಂಕರ್, ಕನ್ಸಲ್ಟಂಟ್ ಮತ್ತು ಅರ್ಥಶಾಸ್ತ್ರಜ್ಞ ರಾಗಿ ಪಟೇಲ್ ಈಗಾಗಲೆ ಹೆಸರು ಮಾಡಿದ್ದಾರೆ. ಆರ್ಥಿಕ ಉದಾರೀಕರಣದ ನೀತಿಯನ್ನು ಆಗಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಬಹಿರಂಗವಾಗಿ ಘೋಷಿಸಿದ ಸಂದರ್ಭದಲ್ಲೇ ಉರ್ಜಿತ್ ಪಟೇಲ್ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಲ್ಲಿ (ಐಎಂಎಫ್) ಭಾರತಕ್ಕೆ ಸಂಬಂಧಿಸಿದ ವ್ಯವಹಾರಗಳ ವಿಭಾಗದಲ್ಲಿದ್ದರು. 1990ರಲ್ಲಿ ಐಎಂಎಫ್ ಸೇರಿ, 94ರವರೆಗೆ ಇಂಡಿಯಾ ಡೆಸ್ಕ್‌ನಲ್ಲಿ ಅನುಭವ ಪಡೆದರು. ಅಮೆರಿಕ, ಬಹಾಮಾ, ಮ್ಯಾನ್ಮಾರ್‌ಗಳಲ್ಲಿ ಕೆಲಸ ಮಾಡಿದರೂ, ಭಾರತದ ಕೆಲಸ ಮಾಡಿದ್ದು ನೆರವಿಗೆ ಬಂತು. ಆರ್‌ಬಿಐಗೆ ಸಲಹೆಗಾರರಾಗಿ ಎರಡು ವರ್ಷದ ಕೆಲಸ, ಬಳಿಕ ಭಾರತ ಸರ್ಕಾರದ ಹಣಕಾಸು ಇಲಾಖೆಗೆ ಕನ್ಸಲ್ಟಂಟ್ ಆಗಿ ಕೆಲಸ ಮಾಡಿದ್ದು ಭಾರತೀಯ ಆರ್ಥಿಕತೆಯನ್ನು ಅರಿತುಕೊಳ್ಳಲು ನೆರವಾಯಿತು. ಈ ಹುದ್ದೆಗಳ ಅವಧಿಯಲ್ಲಿ ಸ್ಪರ್ಧಾ ಆಯೋಗ, ನೇರ ತೆರಿಗೆ ಟಾಸ್ಕ್ ಫೋರ್ಸ್, ಪಿಎಂ ಟಾಸ್ಕ್ ಫೋರ್ಸ್, ರಕ್ಷಣಾ ಇಲಾಖೆ ಪೆನ್ಶನ್ ಸ್ಕೀಂ ಮುಂತಾಗಿ ವಿವಿಧ ಕ್ಷೇತ್ರಗಳಲ್ಲಿ ತಜ್ಞರಾದರು. ಇದೆಲ್ಲದರ ಪರಿಣಾಮವಾಗಿಯೇ 2013ರ ಆಗಸ್ಟ್‌ನಿಂದ ಆರ್‌ಬಿಐ ಡೆಪ್ಯುಟಿ ಗವರ್ನರ್ ಹುದ್ದೆ ಸಿಕ್ಕಿತು. ಆಗ ಇವರ ಹೆಸರನ್ನು ಶಿಫಾರಸ್ಸು ಮಾಡಿದವರು ಮನಮೋಹನ ಸಿಂಗ್! ಇದೀಗ ನೇರ ಗವರ್ನರ್. ಶಿಫಾರಸ್ಸು ನರೇಂದ್ರ ಮೋದಿಯವರದ್ದು!



ಆರ್‌ಬಿಐ ಗವರ್ನರ್ ಆಯ್ಕೆಯ ವೇಳೆ ಉರ್ಜಿತ್‌ರಿಗೆ ತೀವ್ರ ಪೈಪೋಟಿ ಕೊಟ್ಟವರು ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ಅರವಿಂದ್ ಸುಬ್ರಮಣಿಯನ್. ಆದರೆ ಅರವಿಂದ್‌ಗೆ ಹೋಲಿಸಿದರೆ ಉರ್ಜಿತ್ ಬಳಿ ಹೆಚ್ಚು ಡಿಗ್ರಿಗಳಿದ್ದವು; ಅವೂ ಪ್ರತಿಷ್ಠಿತ ವಿದೇಶೀ ವಿಶ್ವವಿದ್ಯಾನಿಲಯಗಳದ್ದು. 1990ರಲ್ಲಿ ಯೇಲ್ ಯೂನಿವರ್ಸಿಟಿಯ ಡಾಕ್ಟರೇಟ್; ಬಳಿಕ ಆಕ್ಸ್‌ಫರ್ಡ್ ಯೂನಿವರ್ಸಿಟಿ ಎಂಫಿಲ್, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅಧ್ಯಯನ! ಸುಬ್ರಮಣಿಯನ್ ಸಿಇಎ ಆದದ್ದು 2014 ಅಕ್ಟೋಬರ್‌ನಿಂದ ಆದ್ದರಿಂದ ಭಾರತದ ಅನುಭವ ಕಡಿಮೆಯೇ.

ಉರ್ಜಿತ್ ನೇಮಕದ ವಿರುದ್ಧ ಆಕ್ಷೇಪಗಳೂ ಇವೆ. ಕೆನ್ಯಾದಲ್ಲಿ ಹುಟ್ಟಿ (28 ಅಕ್ಟೋಬರ್ 1963) ಕೆನಡಾದ ಪೌರತ್ವ ಹೊಂದಿದ್ದ ಉರ್ಜಿತ್ ಪಟೇಲ್, ಭಾರತೀಯ ಪಾಸ್‌ಪೋರ್ಟ್ ಪಡೆದದ್ದು 2013ರಲ್ಲಿ– ಅದೂ ಆರ್‌ಬಿಐ ಡೆಪ್ಯುಟಿ ಗವರ್ನರ್ ಆದಾಗ! 'ಹಿಂದೆ ರಾಜನ್ ಅವರ ವಿರುದ್ಧ ಅಮೆರಿಕ ಪೌರತ್ವದ ಗೂಬೆ ಕೂರಿಸಿದ ಡಾ.ಸುಬ್ರಹ್ಮಣ್ಯಸ್ವಾಮಿ ಈಗೆಲ್ಲಿದ್ದಾರೆ?' ಎನ್ನುವ ಪ್ರಶ್ನೆ ಸಾಮಾಜಿಕ ಜಾಲತಾಣದಲ್ಲಿ ಕೇಳಿಬಂದಿದೆ. ಇನ್ನೊಂದು ಮುಖ್ಯ ಆಕ್ಷೇಪ – ರಿಲಯನ್ಸ್ ಉದ್ಯಮ ಗುಂಪಿನ ಜತೆಗೆ ಉರ್ಜಿತ್ ನಿಕಟವಾಗಿರುವುದು. 1997ರಿಂದ 2006ರ ವರೆಗೆ ರಿಲಯನ್ಸ್ ಇಂಡಸ್ಟ್ರೀಸ್ ನಲ್ಲಿ ಬಿಸಿನೆಸ್ ಡೆವಲಪ್‌ಮೆಂಟ್‌ನ ಅಧ್ಯಕ್ಷರಾಗಿ ಕೆಲಸ ಮಾಡಿದವರು ಉರ್ಜಿತ್. ಪ್ರಧಾನಿ ಮೋದಿಯವರು ರಿಲಯನ್ಸ್ ಮಾಲೀಕರನ್ನು ಮೆಚ್ಚಿಸಲೆಂದೇ ಈ ನೇಮಕ ಮಾಡಿದ್ದಾರೆ ಎನ್ನುವ ಕೂಗೂ ಇದೆ. 'ಇನ್ನು ಆರ್‌ಬಿಐ ಎನ್ನುವುದು ರಿಲಯನ್ಸ್ ಬ್ಯಾಂಕ್ ಆಫ್ ಇಂಡಿಯಾ ಆಗಲಿದೆ' ಎನ್ನುವ ಕುಹಕವೂ ಕೇಳಿಸಿದೆ.

ಉರ್ಜಿತ್ ಅಜ್ಜ ಬ್ರಿಟಿಷರ ಕಾಲದಲ್ಲಿ ಕೆನ್ಯಾಗೆ ತೆರಳಿ ಅಲ್ಲಿ ಬಿಸಿನೆಸ್ ಶುರು ಮಾಡಿದವರು. ಉರ್ಜಿತ್ ಅಪ್ಪನೂ ಅಲ್ಲಿಯೇ ಹುಟ್ಟಿದ್ದು. ನೈರೋಬಿಯಲ್ಲಿ ಅವರ ಸ್ಪೇರ್ ಪಾರ್ಟ್ಸ್ ಉದ್ಯಮವಿದೆ. ಕೆಲವು ವರ್ಷಗಳ ಹಿಂದೆ ತಂದೆಯ ಸಾವಿನ ಬಳಿಕ ಉರ್ಜಿತ್ ಮುಂಬೈಯಲ್ಲೇ ಮನೆ ಮಾಡಿ ತಾಯಿ ಜತೆಗೆ ವಾಸವಿದ್ದವರು. ಅಮ್ಮನ ಜತೆಗೇ ವಾಸ ಮಾಡಬೇಕೆಂಬ ಕಾರಣಕ್ಕಾಗಿ ಇತ್ತೀಚೆಗೆ ಶಾಂಘೈನ ಬ್ರಿಕ್ಸ್ ಬ್ಯಾಂಕ್ ನೀಡಿದ ಉನ್ನತ ಹುದ್ದೆಯ ಆಹ್ವಾನವನ್ನೂ ಉರ್ಜಿತ್ ನಿರಾಕರಿಸಿದ್ದಾರೆ.

2009ರಲ್ಲಿ ಯುಪಿಎ ಎರಡನೇ ಬಾರಿ ಅಧಿಕಾರಕ್ಕೆ ಬಂದಾಗ 100 ದಿನಗಳ ಕ್ರಿಯಾ ಯೋಜನೆಯನ್ನು ಘೋಷಿಸಿತ್ತು. ಆಗ ಹಿಂದಿ ಸುದ್ದಿ ವಾಹಿನಿಯಲ್ಲಿ ಯೋಜನೆಯ ಎಕ್ಸ್‌ಪರ್ಟ್ ಕಾಮೆಂಟ್ರೇಟರ್ ಆಗಿ ಉರ್ಜಿತ್ ಕೆಲಸ ಮಾಡಿದ್ದರು! ಆರ್‌ಬಿಐ ಗೆ 24ನೇ ಗವರ್ನರ್ ಆಗಿರುವ ಉರ್ಜಿತ್‌ರ 17 ವರ್ಷಗಳ ಅನುಭವ ಎಷ್ಟರ ಮಟ್ಟಿಗೆ ನಮ್ಮ ಆರ್ಥಿಕತೆಯನ್ನು ಬಲಗೊಳಿಸಲಿದೆ ಎನ್ನುವುದಕ್ಕೆ ಕಾಲವೇ ಉತ್ತರ ನೀಡಬೇಕು.

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65